**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ಬೇಲೂರು, ನ್ಯಾಯಾಲಯ, ಬೇಲೂರು.**

**ಸಿಸಿ ನಂಬರ್‌ಃ 289/2018**

ಪಿರ್ಯಾದುದಾರರು : ರಾಜ್ಯ ಸರ್ಕಾರದ ಪರವಾಗಿ
ಹಳೇಬೀಡು ಪೊಲೀಸ್ ಠಾಣೆ.

ವಿರುದ್ಧ

ಆರೋಪಿ : ಶ್ರೀ ರವಿ ಬಿನ್ ನಂಜಯ್ಯ, 38 ವರ್ಷ,
ದೊಂಬರಹಟ್ಟಿ ಶಿವನೇನಹಳ್ಳಿ ಗ್ರಾಮ,
ಹಳೇಬೀಡು ಹೋಬಳಿ, ಬೇಲೂರು ತಾಲ್ಲೂಕು,
ಹಾಸನ ಜಿಲ್ಲೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರಡಿಯಲ್ಲಿ ಆರೋಪಿತನ ಹೇಳಿಕೆ

ಪ್ರಶ್ನೆ : 1 : ನ್ಯಾಯಾಲಯದಲ್ಲಿ ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿದಾರರು ನುಡಿದ ಸಾಕ್ಷ್ಯವನ್ನು ಕೇಳಿ ತಿಳಿದುಕೊಂಡಿದ್ದೀರಾ ?

ಉತ್ತರಃ

ಪ್ರಶ್ನೆ : 2 : ಪ್ರಾಸಾ-1 ಶ್ರೀ ವಿಜಯ್ ಕೃಷ್ಣ, ಪಿಎಸ್‌ಐ, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ **04.04.2018** ರಂದು ಸಂಜೆ **4.00** ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿರುವಾಗ ಹಳೇಬೀಡು ಹೋಬಳಿ, ಶಿವನೇನಹಳ್ಳಿ ಗ್ರಾಮದಲ್ಲಿ ರವಿ ಎಂಬುವವರು ತನ್ನ ಮನೆಯ ಮುಂಭಾಗ ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಬಂತು ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ?

ಉತ್ತರ :

ಪ್ರಶ್ನೆ : 3 : ಪ್ರಾಸಾ-1 ಶ್ರೀ ವಿಜಯ್ ಕೃಷ್ಣರವರು ಮುಂದುವರೆದು, ನಂತರ ನಾನು ಮತ್ತು ಸಿಬ್ಬಂದಿಗಳಾದ ಚಾಸಾ-2 ಮತ್ತು ಚಾಸಾ-3 ರವರೊಂದಿಗೆ ಸಂಜೆ **4.00** ಗೆ ಠಾಣೆಯನ್ನು ಬಿಟ್ಟು ಇಲಾಖಾ ಜೀಪ್ ನಲ್ಲಿ ಶಿವನೇನಹಳ್ಳಿ ಗ್ರಾಮಕ್ಕೆ ಹೋಗಿ ಪಂಚರಾದ ಚಾಸಾ-4 ಮತ್ತು ಚಾಸಾ-5 ರವರನ್ನು ಬರಮಾಡಿಕೊಂಡು ಅವರಿಗೆ ಮಾಹಿತಿ ಯನ್ನು ತಿಳಿಸಿ ಪಂಚರಾಗಲು ಸಹಕರಿಸುವಂತೆ ಕೋರಿದ ಮೇರೆಗೆ

ಅವರುಗಳು ಒಪ್ಪಿ ನಮ್ಮ ಜೊತೆ ಬಂದಿರುತ್ತಾರೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ?

ಉತ್ತರ ಃ

ಪ್ರಶ್ನೆ ಃ **4** ಃ ಪ್ರಾಸಾ-**1** ಶ್ರೀ ವಿಜಯ್ ಕೃಷ್ಣರವರು ಮುಂದುವರೆದು, ನಂತರ ಸಂಜೆ **4.45** ಗಂಟೆಗೆ ಆರೋಪಿ ರವಿ ರವರ ಮನೆಯ ಬಳಿ ಹೋಗಿ ನೋಡಲಾಗಿ ಸದರಿ ವ್ಯಕ್ತಿ ಮನೆಯ ಮುಂಭಾಗ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದು, ಆತನನ್ನು ಹಿಡಿದು ಹೆಸರು ವಿಳಾಸ ಕೇಳಲಾಗಿ ರವಿ ಬಿನ್ ನಂಜಯ್ಯ, **38** ವರ್ಷ, ಐಸ್ ಕ್ರೀಂ ವ್ಯಾಪಾರ, ಶಿವನೇನಹಳ್ಳಿ ಗ್ರಾಮ ಎಂದು ತಿಳಿಸಿದನು. ಆತನು ಮದ್ಯ ಮಾರಾಟ ಮಾಡಲು ಯಾವುದೇ ಪರವಾನಗಿ ಇದೆಯೇ ಎಂದು ವಿಚಾರ ಮಾಡಲಾಗಿ ಯಾವುದೇ ರೀತಿಯ ಪರವಾನಗಿ ಇಲ್ಲ ಎಂದು ತಿಳಿಸಿದನು ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ?

ಉತ್ತರ ಃ

ಪ್ರಶ್ನೆ ಃ **5** ಃ ಪ್ರಾಸಾ-**1** ಶ್ರೀ ವಿಜಯ್ ಕೃಷ್ಣರವರು ಮುಂದುವರೆದು, ನಂತರ ಪಂಚರ ಸಮಕ್ಷಮ ಆತನ ಬಳಿ ಇದ್ದ ಮದ್ಯವನ್ನು ಪರಿಶೀಲನೆ ಮಾಡಿದಾಗ **180** ಎಂ ಎಲ್ ನ ಓಲ್ಡ್ ಟವರಿನ್ ವಿಸ್ಕಿಯ ಒಟ್ಟು **5** ಸ್ಯಾಚೇಟ್ ಗಳು **90** ಎಂ ಎಲ್ ನ ರಾಜಾ ವಿಸ್ಕಿಯ **10** ಸ್ಯಾಚೆಟ್ ಗಳು, **90** ಎಂ ಎಲ್ ನ ಅಮೃತ್ ಸಿಲ್ವರ್ ಬ್ರಾಂಡಿ ಯ **10** ಸ್ಯಾಚೇಟ್ ಗಳು ಇದ್ದು ಅವುಗಳನ್ನು ಪಂಚರ ಸಮಕ್ಷಮ ಸಂಜೆ **5.00** ರಿಂದ **5.45** ರವರೆಗೆ ಮಹಜರ್ ಮೂಲಕ ಅಮಾನತ್ತುಪಡಿಸಿಕೊಂಡು ಅವುಗಳಲ್ಲಿ ಎಫ್ ಎಸ್ ಎಲ್ ಗೆಂದು ತಲಾ ಒಂದೊಂದು ಸ್ಯಾಚೆಟ್ ತೆಗೆದು ಅದಕ್ಕೆ ಬಟ್ಟೆ ಕಟ್ಟಿ ದಾರ ಸುತ್ತಿ ಒ ಎಂಬ ಇಲಾಖಾ ಮೊಹರು ಮಾಡಿ ಅಮಾನತ್ತುಪಡಿಸಿಕೊಳ್ಳಲಾಯಿತು ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ?

ಉತ್ತರ ಃ

ಪ್ರಶ್ನೆ ಃ **6** ಃ ಪ್ರಾಸಾ-**1** ಶ್ರೀ ವಿಜಯ್ ಕೃಷ್ಣರವರು ಮುಂದುವರೆದು, ನಂತರ ಆರೋಪಿ ಮತ್ತು ಸ್ವತ್ತಿನೊಂದಿಗೆ ಸಂಜೆ **6.15** ಕ್ಕೆ ಠಾಣೆಗೆ ಬಂದು ರವಿ ಎಂಬುವವನು ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ಬಗ್ಗೆ ವರದಿ ತಯಾರಿಸಿ ವರದಿ ಹಾಗೂ ಮಹಜರ್ ಹಾಗೂ

ವಶಪಡಿಸಿಕೊಂಡ ಸ್ವತ್ತುಗಳನ್ನು ಠಾಣಾ ಎಸ್ ಹೆಚ್ ಒ ಗೆ ನೀಡಿ ಪ್ರಕರಣ ದಾಖಲು ಮಾಡುವಂತೆ ಸೂಚಿಸಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ?

ಉತ್ತರ ಃ

ಪ್ರಶ್ನೆ ಃ **7** ಃ ಪ್ರಾಸಾ-**2** ಶ್ರೀ ಪುನೀತ್ ಯು.ಆರ್., ಪೊಲೀಸ್ ಪೇದೆ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ **04.04.2018** ರಂದು ಸಂಜೆ **4.00** ಗಂಟೆ ಸಮಯದಲ್ಲಿ ಚಾಸಾ-**1** ರವರು ನನ್ನನ್ನು ಮತ್ತು ಚಾಸಾ-**3** ರವರನ್ನು ಠಾಣೆಯಲ್ಲಿರುವಾಗ ಕರೆದು ದಾಳಿಗೆ ಹೋಗಬೇಕಾಗಿ ತಿಳಿಸಿರುತ್ತಾರೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ?

ಉತ್ತರ ಃ

ಪ್ರಶ್ನೆ ಃ **8** ಃ ಪ್ರಾಸಾ-**2** ಶ್ರೀ ಪುನೀತ್ ಯು.ಆರ್. ರವರು ಮುಂದುವರೆದು, ನಾವು **4.10** ಕ್ಕೆ ಠಾಣೆಯಿಂದ ಹೊರೆಟು ಹಳೇಬೀಡು ಹೋಬಳಿ, ಶಿವನೇನಹಳ್ಳಿ ದೊಮ್ಮರಟ್ಟಿ ಗ್ರಾಮಕ್ಕೆ ತೆರಳಿ ಪಂಚರಾದ ಚಾಸಾ-**4** ರಿಂದ ಚಾಸಾ-**6** ರವರಿಗೆ ದಾಳಿ ಮಾಡುವ ವಿಷಯ ತಿಳಿಸಿ ಪಂಚರಾಗಿ ಸಹಕರಿಸಲು ಕೋರಿದ ಮೇರೆಗೆ ಅವರು ಒಪ್ಪಿ ನಮ್ಮ ಜೊತೆ ಬಂದಿರುತ್ತಾರೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ?

ಉತ್ತರ ಃ

ಪ್ರಶ್ನೆ ಃ **9** ಃ ಪ್ರಾಸಾ-**2** ಶ್ರೀ ಪುನೀತ್ ಯು.ಆರ್. ರವರು ಮುಂದುವರೆದು, ನಂತರ ಸಂಜೆ **4.45** ಗಂಟೆಗೆ ಆರೋಪಿ ರವಿ ಬಿನ್ ನಂಜಯ್ಯ ರವರ ಮನೆಯ ಬಳಿ ಹೋಗಿ ನೋಡಲಾಗಿ ಸದರಿ ವ್ಯಕ್ತಿ ಮನೆಯ ಮುಂದೆ ಜಗುಲಿಯ ಮೇಲೆ ಒಂದು ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರ್ ನಲ್ಲಿ ಅಕ್ರಮವಾಗಿ ಮದ್ಯ ಇಟ್ಟುಕೊಂಡಿರುವುದು ಕಂಡು ಬಂದಿರುತ್ತದೆ. ಕೂಡಲೇ ಚಾಸಾ-**1** ರವರು ಆತನನ್ನು ಹಿಡಿದು ಹೆಸರು ವಿಳಾಸ ಕೇಳಲಾಗಿ ರವಿ ಬಿನ್ ನಂಜಯ್ಯ ಎಂದು ತಿಳಿಸಿರುತ್ತಾನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ?

ಉತ್ತರ ಃ

ಪ್ರಶ್ನೆ ಃ **10** ಃ ಪ್ರಾಸಾ**-2** ಶ್ರೀ ಪುನೀತ್ ಯು.ಆರ್**.** ರವರು ಮುಂದುವರೆದು**,** ನಂತರ ಪಂಚರ ಸಮಕ್ಷಮ ಆತನ ಬಳಿ ಇದ್ದ ಮದ್ಯವನ್ನು ಪರಿಶೀಲನೆ ಮಾಡಿದಾಗ **180** ಎಂ ಎಲ್ ನ ಓಲ್ಡ್ ಟವರಿನ್ ವಿಸ್ಕಿಯ ಒಟ್ಟು **5** ಸ್ಯಾಚೇಟ್ ಗಳು**, 90** ಎಂ ಎಲ್ ನ ರಾಜಾ ವಿಸ್ಕಿಯ **10** ಸ್ಯಾಚೆಟ್ ಗಳು**, 90** ಎಂ ಎಲ್ ನ ಅಮೃತ್ ಸಿಲ್ವರ್ ಬ್ರಾಂಡಿ ಯ **10** ಸ್ಯಾಚೇಟ್ ಗಳು ಇದ್ದು ಅವುಗಳನ್ನು ಪಂಚರ ಸಮಕ್ಷಮ ಸಂಜೆ **5.00** ರಿಂದ **5.45** ವರೆಗೆ ಮಹಜರ್ ಮೂಲಕ ಅಮಾನತ್ತುಪಡಿಸಿಕೊಂಡೆವು ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ**.** ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ**?**

ಉತ್ತರ ಃ

ಪ್ರಶ್ನೆ ಃ **11** ಃ ಪ್ರಾಸಾ**-2** ಶ್ರೀ ಪುನೀತ್ ಯು.ಆರ್**.** ರವರು ಮುಂದುವರೆದು**,** ನಂತರ ಅವುಗಳಲ್ಲಿ ಎಫ್ ಎಸ್ ಎಲ್ ಗೆಂದು ತಲಾ ಒಂದೊಂದು ಸ್ಯಾಚೆಟ್ ತೆಗೆದು ಅದಕ್ಕೆ ಬಟ್ಟೆ ಕಟ್ಟಿ ದಾರ ಸುತ್ತಿ ಇಲಾಖಾ ಮೊಹರು ಮಾಡಿ ಅಮಾನತ್ತುಪಡಿಸಿಕೊಳ್ಳಲಾಯಿತು**.** ನಂತರ ಆರೋಪಿ ಮತ್ತು ಸ್ವತ್ತಿನೊಂದಿಗೆ ಸಂಜೆ **6.15** ಕ್ಕೆ ಠಾಣೆಗೆ ಬಂದು ಚಾಸಾ**-10** ರವರಿಗೆ ನಾನು ನನ್ನ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ**.** ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ**?**

ಉತ್ತರ ಃ

ಪ್ರಶ್ನೆ ಃ **12** ಃ ಪ್ರಾಸಾ**-5** ಶ್ರೀ ಗೋವಿಂದಪ್ಪ**,** ಎ.ಎಸ್.ಐ**.,** ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ **04.04.2018** ರಂದು ನಾನು ಠಾಣಾ ಎಸ್.ಹೆಚ್.ಓ**.** ಕರ್ತವ್ಯದಲ್ಲಿದ್ದಾಗ ಚಾಸಾ**-1** ರವರಿಂದ ವರದಿ**,** ಮಹಜರ್ ಮತ್ತು ಅಮಾನತುಪಡಿಸಿಕೊಂಡ ಸ್ವತ್ತುಗಳನ್ನು ಸ್ವೀಕರಿಸಿ ಠಾಣಾ ಗುನ್ನಾ ನಂ**.116/2018** ಕಲಂ **32, 34** ಕರ್ನಾಟಕ ಅಬಕಾರಿ ಕಾಯ್ದೆಯಡಿ ಪ್ರಕರಣವನ್ನು ದಾಖಲಿಸಿಕೊಂಡಿರುತ್ತೆನೆ**.** ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ**.** ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ**?**

ಉತ್ತರ ಃ

ಪ್ರಶ್ನೆ ಃ **13** ಃ ಪ್ರಾಸಾ**-5** ಶ್ರೀ ಗೋವಿಂದಪ್ಪರವರು ಮುಂದುವರೆದು**,** ಅಮಾನತ್ತು ಪಡಿಸಿಕೊಂಡಿದ್ದ **180** ಎಂ.ಎಲ್**.** ಓಲ್ಡ್ ಟವರಿನ್ ವಿಸ್ಕಿ **5** ಸ್ಯಾಚೇಟ್ ಗಳು**, 90** ಎಂ.ಎಲ್.ನ ರಾಜಾ ವಿಸ್ಕಿ **10**

ಸ್ಯಾಚೇಟ್ ಗಳು, **90** ಎಂ.ಎಲ್.ನ ಅಮೃತ್ ಸಿಲ್ವರ್ ಕಪ್ ಬ್ರಾಂಡಿ **10** ಸ್ಯಾಚೇಟ್ ಗಳ ಪೈಕಿ ತಲಾ ಒಂದರಂತೆ ರಾಸಾಯನಿಕ ಪರೀಕ್ಷೆಗೆ ಮಾದರಿ ತೆಗೆದು ಬಿಳಿ ಚೀಲದಲ್ಲಿ ಒ ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲು ಮಾಡಿರುತ್ತೇವೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ?

ಉತ್ತರ ಃ

ಪ್ರಶ್ನೆ ಃ **14** ಃ ಪ್ರಾಸಾ-**5** ಶ್ರೀ ಗೋವಿಂದಪ್ಪರವರು ಮುಂದುವರೆದು, ದಾಳಿ ಸಮಯದಲ್ಲಿ ಪಂಚರ ಸಹಿ ಪಡೆದುಕೊಂಡಿರುತ್ತೇನೆ. ಚಾಸಾ-**2** ರಿಂದ **6** ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಚಾಸಾ-**9** ರವರನ್ನು ಎಫ್.ಎಸ್.ಎಲ್. ಪರೀಕ್ಷೆಗೆ ಮಾದರಿ ತೆಗೆದ ಸ್ವತ್ತುಗಳೊಂದಿಗೆ ಕಳುಹಿಸಿರುತ್ತೇನೆ. ದಿನಾಂಕ **26.06.2018** ರಂದು ಪರೀಕ್ಷಾ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ಆರೋಪಿ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ?

ಉತ್ತರ ಃ

ಪ್ರಶ್ನೆ ಃ **15** ಃ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನೀವೇನಾದರೂ ಹೇಳುವುದು ಇದೆಯಾ?
ಉತ್ತರ ಃ

ಪ್ರಶ್ನೆ ಃ **16** ಃ ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯಾ?
ಉತ್ತರ ಃ

ಪ್ರಶ್ನೆ ಃ **17** ಃ ನಿಮ್ಮ ಪರವಾಗಿ ಯಾವುದಾದರೂ ದಾಖಲಾತಿಯನ್ನು ಹಾಜರು ಪಡಿಸುವಿರಾ?
ಉತ್ತರ ಃ

**(ಮೇಲ್ಕಂಡ ಅಂಶಗಳನ್ನು ಆರೋಪಿಗೆ ಓದಿ ಹೇಳಿ ನಂತರ ಅವರು ನೀಡಿದ ಉತ್ತರವನ್ನು ಬರೆದುಕೊಂಡು ಸರಿಯಾಗಿದೆ ಎಂದು ಧೃಡೀಕರಿಸಿದೆ)**

ದಿನಾಂಕ ಃ **19.02.2026**
ಸ್ಥಳ ಃ ಬೇಲೂರು

(ಶ್ರೀ.ನಾಗೇಂದ್ರ.)
ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಬೇಲೂರು.